(xii) ಭೂಮಾಪನ ಇಲಾಖೆಯಲ್ಲಿ ನೇಮಕಾತಿ ಮತ್ತು ಬಡ್ತಿ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ ಭೂಮಾಪನ ಇಲಾಖೆಯಲ್ಲಿ ಅಸಿಸ್ಟೆಂಟ್ ಗುಮಾಸ್ತರು ; ಸಬ್ ಅಸಿಸ್ಟೆಂಟ್ ಗುಮಾಸ್ತರುಗಳನ್ನು ತೆಗೆದುಕೊಳ್ಳುವ ಬಗ್ಗೆ No. RDC 39 dated 17-1-84 ಪ್ರಕಾರ ಆದೇಶ ನೀಡಿದ್ದಾರೆ. 1-1-83ರಲ್ಲಿ ಮಾಡಿರುವಂಥ ಸೀನಿಯಾರಿಟಿ ಪಟ್ಟಿಯನ್ನು ಬಿಟ್ಟು ಯಾರಯಾರನ್ನೋ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಲಾಗುತ್ತಿದೆ. ಈ ಮಧ್ಯೆ ಸರ್ಕಾರ, Guidelines to determine between direct recruitments and promotees ಬಗ್ಗೆ ಸರ್ಕಾರದ ಆರ್ಡರ್ ಇಷ್ಯೂ ಮಾಡಿದ್ದಾರೆ. ಈಗ ಅಲ್ಲಿ 1-1-83ರ ಸೀನಿಯಾರಿಟಿ ಪಟ್ಟಿ ಅಧಾರವಾಗಿಟ್ಟುಕೊಂಡು ನೇಮಕ ಮಾಡಬೇಕೆಂದು ಆರ್ಡರ್ಸ್ ಇಷ್ಯೂ ಮಾಡಿದ್ದಾರೆ ಮಾನ್ಯ ಮಂತ್ರಿಗಳಲ್ಲಿ ನಾನು ವಿನಂತಿಸಿಕೊಳ್ಳುವುದೇನೆಂದರೆ, ಸರ್ಕಾರದವರು ಹೊರಡಿಸಿರುವಂಥ ಆಜ್ಞೆಯ ಆಧಾರದ ಮೇಲೆ ನೇಮಕಗಳು ಮತ್ತು ಪ್ರೋಮೋಷನ್‌ಗಳು ಆಗಬೇಕು. ಈ ವಿಚಾರದಲ್ಲಿ ಮಾನ್ಯ ಮಂತ್ರಿಯವರಿಂದ ಸ್ಪಷ್ಟ ಉತ್ತರ ಬಯಸುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಸದಸ್ಯರು ಹೇಳಿದ ಪ್ರಕಾರ ಕೂಡಲೇ ವಿವರ ತರಿಸಿ ನೋಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—8-10 ದಿವಸಗಳ ಹಿಂದೆ ಮಾನ್ಯ ಮಂತ್ರಿಯವರನ್ನು ಕಂಡು ಹೇಳಿದ್ದೇನೆ. ಇವತ್ತು ನಾಳೆ ಕಳೆದರೆ ಎಲ್ಲಾ ವ್ಯವಹಾರ ಮುಗಿದು ಹೋಗುತ್ತೆ ; ಸೀನಿಯಾರಿಟಿ ಇರತಕ್ಕವರಿಗೆ ಅನ್ಯಾಯವಾಗುತ್ತದೆ. ತೀವ್ರವಾಗಿ ಮಾನ್ಯ ಮಂತ್ರಿಯವರು ಗಮನಕೊಡಬೇಕೆಂದು ಹೇಳುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.—ಇವತ್ತೇ ಇದರ ಬಗ್ಗೆ ಗಮನಕೊಡುತ್ತೇನೆ. ವಿಚಾರತಿಳಿದು ಹೇಳಿಕೆ ಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಮಗೆ ಹೇಳಿಕೆ ಬೇಕಾಗಿಲ್ಲ ಸರ್ಕಾರದ ಆಜ್ಞೆ ಕಳುಹಿಸಿಕೊಡುತ್ತೇನೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

(xiii) ಕೆ.ಪಿ.ಸಿ.ಎಸ್. ಯವರು ಮೋಟಾರ್ ವೆಹಿಕಲ್ಸ್ ಇನ್ಸ್‌ಪೆಕ್ಟರ್ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ

ಶ್ರೀ ಎಂ. ಮಹದೇವ್(ನಂಜನಗೂಡು).—ಅಧ್ಯಕ್ಷರೇ, ಕೆ.ಪಿ.ಎಸ್.ಸಿ. ಯವರು 56 ಮೋಟಾರ್ ವೆಹಿಕಲ್ಸ್ ಇನ್ಸ್‌ಪೆಕ್ಟರ್ ಹುದ್ದೆಗಳಿಗೆ ಅರ್ಜಿಯನ್ನು ಕರೆದಿದ್ದಾರೆ. ಇದರಲ್ಲಿ ಏನಾಗಿದೆ ಎಂದರೆ ನಮಗೆ ತಿಳಿದಹಾಗೆ ವಾಹನಗಳ ಅಪಘಾತಗಳ ಸಂಖ್ಯೆ ನಮ್ಮ ರಾಜ್ಯದಲ್ಲಿ ಜಾಸ್ತಿಯಾಗುತ್ತಿದೆ. ವಾಹನಗಳ ಅಪಘಾತವನ್ನು ತಪ್ಪಿಸಬೇಕಾದರೆ ಸರಿಯಾದಂಥ ಇನ್ಸ್‌ಪೆಕ್ಟರ್‌ಗಳು ಬೇಕಾಗುತ್ತದೆ. ಇದರಲ್ಲಿ ಟ್ರೈನ್ಡ್ ಆದಂಥ ಜನ ಬೇಕಾಗುತ್ತದೆ. ಆದುದರಿಂದ ಸೆಲೆಕ್ಷನ್ ಮಾಡುವಾಗ ಡಿಪ್ಲೊಮೊ ಇನ್ ಆಟೋ ಮೊಬೈಲ್ ಟೆಕ್ನಾಲಜಿಯಾಗಿರತಕ್ಕವರನ್ನು ನೇಮಿಸಿಕೊಂಡರೆ ವಾಹನಗಳ ಅಪಘಾತಗಳು ಕಡಿವೆಯಾಗುತ್ತದೆ. ಆದರೆ ಇವತ್ತಿನ ದಿವಸ ಡಿಪ್ಲೊಮೊ ಇನ್ ಮೆಕಾನಿಕಲ್ ಆಗಿರತಕ್ಕವರನ್ನು ನೇಮಕ ಮಾಡಿಕೊಳ್ಳುತ್ತಿದ್ದಾರೆ, ಆದುದರಿಂದ ಸರ್ಕಾರದವರು ಡಿಪ್ಲೊಮೊ ಆಟೊಮೊಬೈಲ್ ಪಾಸ್ ಆಗಿರತಕ್ಕವರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಸರ್ಕಾರದವರಲ್ಲಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ ಸಾರಿಗೆ ರಾಜ್ಯ ಮಂತ್ರಿಗಳು.—ಯಾವ ಅರ್ಹತೆಯ ಮೇಲೆ ನೇಮಕ ಮಾಡಿಕೊಳ್ಳಬೇಕು ಎನ್ನುವ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಈಗಿರತಕ್ಕ ಬಿ. ಇ. ಮತ್ತು ಡಿಪ್ಲೊಮೊ ಜೊತೆಗೆ ಡಿಪ್ಲೊಮೊ ಇನ್ ಆಟೋಮೊಬೈಲ್ ಆಗಿರತಕ್ಕವರನ್ನೇ ತೆಗೆದುಕೊಳ್ಳಬೇಕೆಂದು ಮಾನ್ಯ ಸದಸ್ಯರು ಸಲಹೆ ಕೊಟ್ಟಿದ್ದಾರೆ. ಆದನ್ನು ಸಹ ಸರ್ಕಾರ ಪರ್ಯಾಲೋಚನೆ ಮಾಡುತ್ತದೆ.

(xvi) ಬೆಳಗಾಂ ಜಿಲ್ಲೆಯ ಬರಗಾಲ ಪ್ರದೇಶದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ತೆಗದುಕೊಳ್ಳುವ ಬಗ್ಗೆ

ಶ್ರೀ ಎಂ. ಎಸ್. ಪಾಟೀಲ್(ಸಂಕೇಶ್ವರ).—ಅಧ್ಯಕ್ಷರೇ, ಬೆಳಗಾಂ ಜಿಲ್ಲೆಯ ಹಲವಾರು ಭಾಗಗಳಲ್ಲಿ ಬರಗಾಲ ಪರಿಸ್ಥಿತಿ ನಿರ್ಮಾಣವಾಗಿದೆ. ಈ ವಿಷಯದ ಬಗ್ಗೆ ಮಾನ್ಯ ಮಂತ್ರಿಗಳವರ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತಿದ್ದೇನೆ. ಅಲ್ಲಿ ನಿಜವಾಗಿಯೂ ಭಯಂಕರವಾದ ಪರಿಸ್ಥಿತಿ ನಿರ್ಮಾಣವಾಗಿದೆ, ಇದರ ಬಗ್ಗೆ ಮಂತ್ರಿಗಳವರು ಜಿಲ್ಲಾಧಿಕಾರಿಗಳವರಿಗೆ ಮತ್ತು ವಿಭಾಗಾಧಿಕಾರಿಗಳಿಗೆ ವಿಶೇಷವಾದ ಕಾರ್ಯ

ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ಏನಾದರೂ ತಿಳಿಸಿದ್ದಾರೆಯೇ ? ಇದರ ಬಗ್ಗೆ ಮಾನ್ಯ ಮಂತ್ರಿಗಳವರು ಅಲ್ಲಿಯ ಶಾಸಕರ ಸಭೆಯನ್ನು ಕರೆದು ಈ ಬರಗಾಲ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡಿ ಸೂಕ್ತವಾದ ಕ್ರಮವನ್ನು ಕೈಗೊಳ್ಳುತ್ತಾರೆಯೇ ? ಇಲ್ಲದಿದ್ದರೆ ಮಾನ್ಯ ಮಂತ್ರಿಗಳವರು ಬೆಳಗಾಂ ಜಿಲ್ಲೆಗೆ ಹೋದರೆ ಅಲ್ಲಿ ಜನ ಘೆರಾವೋ ಮಾಡತಕ್ಕ ಪರಿಸ್ಥಿತಿ ಬಂದಿದೆ, ಆದುದರಿಂದ ದಯವಿಟ್ಟು ಆ ಪರಿಸ್ಥಿತಿ ಬಾರದ್ದ ಹಾಗೆ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವಿ. ಎಲ್. ಪಾಟೀಲ್(ಕಂದಾಯ ಮಂತ್ರಿಗಳು.)— ಮಾನ್ಯ ಅಧ್ಯಕ್ಷರೇ ಬೆಳಗಾಂ ಜಿಲ್ಲೆ, ಯಲ್ಲಿ ಸುಮಾರು ಹುಕ್ಕೇರಿ ತಾಲ್ಲೂಕಿನಲ್ಲಿ 39 ಹಳ್ಳಿಗಳು, ಚಿಕ್ಕೋಡಿ ತಾಲ್ಲೂಕಿನಲ್ಲಿ 22 ಹಳ್ಳಿಗಳು, ಗೋಕಾಕತಾಲ್ಲೂಕಿನಲ್ಲಿ 19, ಸವದತ್ತಿ ತಾಲ್ಲೂಕಿನಲ್ಲಿ 24, ರಾಮದುರ್ಗ ತಾಲ್ಲೂಕಿನಲ್ಲಿ 29, ಹಳ್ಳಿಗಳ ಹೀಗೆ ಒಟ್ಟು 149 ಹಳ್ಳಿಗಳು ಬರಗಾಲಕ್ಕೆ ತುತ್ತಾಗಿವೆ. ಬರಗಾಲ ಪರಿಹಾರ ಕಾಮಗಾರಿಗಳಿಗಾಗಿ ಸುಮಾರು 1983-84 ರಲ್ಲಿ 67.16 ಲಕ್ಷವನ್ನು ಈಗಾಗಲೇ ರಿಲೀಸ್ ಮಾಡಿದ್ದೇವೆ. ಮತ್ತು 31-3-1984 ರಂದು 52 ಲಕ್ಷ ರೂ. ಗಳನ್ನು ರಿಲೀಸ್ ಮಾಡಿದ್ದೇವೆ. ಈಗ ಒಟ್ಟು ಎಲ್ಲಾ ತಾಲ್ಲೂಕ್‌ಗಳಲ್ಲಿ 548 ಕೆಲಸಗಳನ್ನು ತೆಗೆದುಕೊಂಡಿದ್ದೇವೆ. ಅದರಲ್ಲಿ 182 ಕೆಲಸ ಪೂರ್ತಿಯಾಗಿದೆ. ಇನ್ನು ಕೆಲವು ಕಡೆಗಳಲ್ಲಿ ಕೆಲಸ ಪೂರ್ತಿಯಾಗಿಲ್ಲ ಮಾಡಬೇಕಾಗಿದೆ. ಆದುದರಿಂದ ಅದಕ್ಕೆ ಬೇಕಾದ ಎಲ್ಲಾ ಕೆಲಸವನ್ನು ಸಹ ಸರ್ಕಾರ ಅಲ್ಲಿ ತೆಗೆದುಕೊಳ್ಳುತ್ತದೆ.

(xv) ಮೈಸೂರು C.I.T.B. ಯಲ್ಲಿ ಅವ್ಯವಹಾರ

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಮೈಸೂರು ಸಿ.ಐ.ಟಿ.ಬಿ. ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ನಾನು ಅಲ್ಲಿಗೆ ಮೊನ್ನೆ ದಿವಸ ಹೋಗಿದ್ದಾಗ ಕೆಲವು ಜನ ಬಂದು ನನ್ನನ್ನು ಭೇಟಿಯಾಗಿ ಮನವಿಗಳನ್ನು ಕೊಟ್ಟು ಹೋಗಿದ್ದಾರೆ. ನಾನು ಆಗ ಪತ್ರಿಕಾ ವರದಿಗಾರರನ್ನು ಕರೆದು ಒಂದು ಹೇಳಿಕೆಯನ್ನು ಕೊಟ್ಟೆ. ಆನಂತರ ಅಲ್ಲಿಯ ಸಿ.ಐ.ಟಿ.ಬಿ. ಅಧ್ಯಕ್ಷರು ಅವರು ಸಹ ಒಂದು ಹೇಳಿಕೆ ನೀಡಿ ಇದಕ್ಕಿಂತ ಹೆಚ್ಚು ಅವ್ಯವಹಾರಗಳು ಅಲ್ಲಿ ಹಿಂದೆ ನಡೆದಿದೆ ಎಂದು ಹೇಳಿಕೆ ನೀಡಿದ್ದಾರೆ. ಸ್ಪೇರ್‌ಪೈಟ್‌ಗಳನ್ನು ಹಿಂದೆ ಇದ್ದವರು ಯಾರೋ ಕೊಟ್ಟು ಬಿಟ್ಟಿದ್ದಾರೆ ಎಂದು ಹೇಳಿದ್ದಾರೆ. ಯಾರೇ ತಪ್ಪು ಮಾಡಿರಲಿ ಅದು ತಪ್ಪು ಆಗಿದ್ದರೆ ತಪ್ಪು ಎಂದೇ ಹೇಳಬೇಕಾಗುತ್ತದೆ. ಆದುದರಿಂದ ಅದನ್ನು ಇವರು ಸರಿ ಮಾಡಲಿಕ್ಕೆ ಹೋಗುವುದು ಬೇಡ

ಅಧ್ಯಕ್ಷರು.—ಡಿಟೇಲ್ಸ್‌ಗೆ ಹೋಗುವುದು ಬೇಡ

ಶ್ರೀ ಎಂ. ವೀರಪ್ಪಮೊಯ್ಲಿ.—ತಾವು ಅನುಮತಿ ಕೊಟ್ಟರೆ ಹೇಳುತ್ತೇನೆ. ಇಲ್ಲದಿದ್ದರೆ ವಿಷಯವನ್ನೇ ಹೇಳುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು.—ನಿಯಮ 334ರ ಕೆಳಗೆ 32 ವಿಷಯಗಳು ಬಂದಿವೆ. ಹೀಗಾದರೆ ನಾವು ಅವುಗಳನ್ನೆಲ್ಲಾ ಯಾವಾಗ ತೆಗೆದುಕೊಂಡು ಪೂರೈಸುವುದು ?

ಶ್ರೀ ಎಂ. ವೀರಪ್ಪಮೊಯ್ಲಿ.—334ನೇ ನಿಯಮದ ಕೆಳಗೆ ಬಹಳ ಪ್ರಾಮುಖ್ಯವಾದ ವಿಚಾರವನ್ನು ಎತ್ತುತ್ತಿದ್ದೇನೆ, ಎತ್ತಬಾರದೆಂದು ತಾವು ಹೇಳುವುದಾದರೆ.

ಅಧ್ಯಕ್ಷರು.—ಎತ್ತಬಾರದೆಂದು ನಾನು ಹೇಳುತ್ತಿಲ್ಲ, ಹಾಗೆ ಹೇಳುವ ಹಾಗಿದ್ದರೆ ನಾನು ಏತಕ್ಕೆ ಅವಕಾಶ ಮಾಡಿಕೊಡಬೇಕಾಗಿತ್ತು ? ಒಬ್ಬೊಬ್ಬರು ಒಂದೊಂದು ವಿಷಯದ ಬಗ್ಗೆ 10-15 ನಿಮಿಷ ಮಾತನಾಡಿದರೆ 334 ಕೆಳಗೆ ಇರತಕ್ಕ 20-30 ವಿಷಯಗಳನ್ನು ಮುಗಿಸುವುದಾದರೂ ಹೇಗೆ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ತಾವು ನಿಯಮದ ಪ್ರಕಾರವಾಗಿಯೇ ಫಾಲೋ ಮಾಡುವುದಾದರೆ ನಿಯಮದ ಪ್ರಕಾರವಾಗಿಯೇ ಹೋಗೋಣ.

12-30 p.m.

ನಮ್ಮ ಆಡಳಿತ ಬಂದ ಮೇಲೆ ಸಿ.ಐ.ಟಿ.ಬಿ ಯಲ್ಲಿ 10 ದಿವಸಗಳಲ್ಲಿ 2000 ನೀವೇಶನಗಳನ್ನು ಹಂಚಲಾಗಿದೆ ಎಂದು ಹೇಳಿದ್ದಾರೆ. 10 ದಿವಸಗಳಲ್ಲಿ 2000 ನಿವೇಶನಗಳನ್ನು ಹಂಚುವುದು ಅಂದರೆ ಬಹಳ ದಕ್ಷತೆ ಇದೆ ಎಂದು ಹೇಳಬೇಕಾಗುತ್ತದೆ. 10 ದಿವಸಗಳಲ್ಲಿ 2000 ನಿವೇಶನಗಳನ್ನು ಹಂಚಿದ್ದರಿಂದ ಬಹಳ ಒಳ್ಳೆಯ ಕೆಲಸ ಮಾಡುತ್ತಾ ಇದ್ದಾರೆ ಎಂದು ಜನ ಹೇಳುತ್ತಾರೆ ಎಂಬುದಾಗಿ ಅವರ ದೇಳಿಕೆ ಇದೆ. ಆಮೇಲೆ 100 ದಿವಸಗಳಲ್ಲಿ 5 ಕೋಟಿ ರೂಪಾಯಿಗಳ ವ್ಯವಹಾರ ಆಗಿಬಿಟ್ಟಿದೆ. ಅದು ವ್ಯವಹಾರವೋ, ಅವ್ಯವಹಾರವೋ ಎಂದು ನೋಡಬೇಕಾಗಿದೆ. ಇದು ಯಾರ